288

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
741	ಮೈಸೂರನಲ್ಲಿ ಇರುವ ಸ್ಮಾರ್ತ ಬ್ರಾಹ್ಮಣ ಮುದು ಜೋಡಿ ವೆಂಕಟಭಟ್ಟ.	ತಲಕಾಡು ತಾಲ್ಲೂಕು ಜೊಮ್ಮನಾಯಕ ನಹಳ್ಳಿಯಲ್ಲಿ ಇರುವ ಕುರ ನೊಂಮಗ ಅರಮನೆ ಬಸವೇಗೌಡ.	18—3—82	18—3—82	(300) ರೂಪಾಯಿನ ಭೂಸ್ತಿತಿ ಆಧಾರ ಪತ್ರ.
81—82 ನೇ ಇಸವಿ	ಗಂದೂರು ಕಪನಯ್ಯನವ ಕೊಡಂಗಿ ಮಾದೇಗೌಡ ನಾಕರೀಯಿಂದ ಜೀವಿಸುವ ನಮಗ ಕೂಲಿ ಜೀವನದೆ				

ಅಬ್ದುಲ್‌ಖಾದರ್, ಕೆ. ಬಿ, ರಿಜಿಸ್ಟ್ರಾರ್.

ನಗರ ಡಿವೀರ್ಜ್.

ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 44.

ಮೃತಪಟ್ಟ ರಂಗಾಮೇಸ್ತ್ರಿಯ ಆಸ್ತಿ ವಿಷಯದಲ್ಲಿ—

ಅರ್ಜೀದಾರ ರಾಮಯ್ಯ. ಮೃತಪಟ್ಟ ಸದರೀ ರಂಗಾಮೇಸ್ತ್ರಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಶಿವಮೊಗ್ಗಾ ಸ್ಥಳದ ರಾಮಯ್ಯನು, ಶಿವಮೊಗ್ಗಾ ವಾಸಸ್ಥನಾಗಿ ಮೃತಪಟ್ಟ ರಂಗಾಮೇಸ್ತ್ರಿಯ ಜಿಂದಗಿ ಬಗ್ಯಾಗಿ ಬರತಕ್ಕ ಸುಮಾರು 500 ರೂಪಾಯಿವರಿಗಿನ ಸೂಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರಾಮಯ್ಯನ ಅರ್ಜೀಯನ್ನು 1884ನೇ ಇಸವಿ ಜುಲೈ ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಾಮೇಸ್ತ್ರಿಯ ಆಸ್ತಿಗೆ ಹಕ್ಕುದಾರರಾದ ವಿಶೆಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 47.

ಮೃತಪಟ್ಟ ಆಸ್ಪಿಟಲ್ ಅಸಿಸ್ಟೆಂಟ್ ಅಂತೋನಿ ಲಾಜರಸಿನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮರಿಸೂಸೆಲಾಜರಸ್, ಮೃತಪಟ್ಟ ಸದರೀ ಅಂತೋನಿ ಲಾಜರಸಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೊಪ್ಪದ ಸ್ಥಳದ ಮರಿಸೂಸೆಲಾಜರಸ್ ಯಂಬವನು ಕೊಪ್ಪದ ವಾಸಸ್ಥನಾಗಿ ಮೃತಪಟ್ಟ ಅಂತೋನಿ ಲಾಜರಸನ ಜಿಂದಗಿ ಬಗ್ಯಾಗಿ ಕಡೂರು ಡಿವೀರ್ಜ ಎಗ್ಜಿಕ್ಯೂಟಿವ್ ಇಂಜಿನಿಯರವರಿಂದ ಮೃತಪಟ್ಟವನಿಗೆ ಬರತಕ್ಕ ಸುಮಾರು 200 ರೂಪಾಯಿಗಳ ಸೂಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮರಸೂಸೆಲಾಜರಸ್‌ನ ಅರ್ಜೀಯನ್ನು 1884ನೇ ಇಸವಿ ಜುಲೈ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಂತೋನಿ ಲಾಜರಸಿನ ಆಸ್ತಿಗೆ ಹಕ್ಕುದಾರರಾದ ವಿಶೆಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1884ನೇ ಇಸವಿ ಏಪ್ರೆಲ್ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.